ಅ) ಸರ್ಕಾರವು ಕರ್ನಾಟಕ ಹಾಲು ಮಹಾಮಂಡಳಿಯಲ್ಲಿ ಡೈರಿ ಉದ್ಯಮದಲ್ಲಿ ವೃತ್ತಿ ತರಬೇತಿ ಹೊಂದಿದ ಅಭ್ಯರ್ಥಿಗಳನ್ನು ನೇಮಕ ಮಾಡುವುದೇ;

ಆ) ಇಲ್ಲವಾದರೆ ಅದಕ್ಕೆ ಕಾರಣಗಳೇನು ?

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು):–

ಅ ಮತ್ತು ಆ) ಪ್ರಸ್ತುತ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಇಂತಹ ಅಭ್ಯರ್ಥಿಗಳ ನೇಮಕಕ್ಕೆ ಅವಕಾಶವಿರುವುದಿಲ್ಲ. ಕೆ.ಎಂ.ಎಫ್.ಗೆ ಸರ್ಕಾರವು ಇಂತಹ ಅಭ್ಯರ್ಥಿಗಳನ್ನು ಕಳುಹಿಸಿರುವಂತ ಪರಿಣತಿಯ ಆಧಾರದ ಮೇಲೆ ಕೆ.ಎಂ.ಎಫ್.ನಲ್ಲಿ ಸೂಕ್ತ ಹುದ್ದೆಗಳನ್ನು ನೀಡಲು ಸಾಧ್ಯವಾಗುತ್ತದೆಯೇ ಎಂಬ ವಿಚಾರವನ್ನು ಪರಿಶೀಲಿಸಲು ಕೋರಲಾಗಿದೆ.

ಅರೆಕಾಲಿಕ ಶಿಕ್ಷಕರ ಸೇವೆಯನ್ನು ಸಕ್ರಮ

1585: ಜಿ. ಪುಟ್ಟಸ್ವಾಮಿಗೌಡ (ಹೊಳೇನರಸೀಪುರ):–

ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಯುವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ವಿವಿಧ ಸರ್ಕಾರಿ ಪ್ರೌಢಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅರೆಕಾಲಿಕ ಶಿಕ್ಷಕರ ಸಂಖ್ಯೆ ಎಷ್ಟು;

ಆ) ಇವರ ಸೇವೆಗಳನ್ನು ಸಕ್ರಮಗೊಳಿಸಲು ಅಥವಾ ಖಾಯಂ ಶಿಕ್ಷಕರನ್ನಾಗಿ ವಿಲೀನ ಮಾಡಿಕೊಳ್ಳುವ ಬಗ್ಗೆ ಏನಾದರೂ ಪ್ರಸ್ತಾವನೆ ಇದೆಯೇ ?

ಡಾ. ಹೆಗ್ಗಪ್ಪ ಡಿ.ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):–

ಅ) 16

ಆ) ಇಲ್ಲ.

ರಾಜ್ಯದಲ್ಲಿ ಮೀನು ಮರಿ ಉತ್ಪಾದನೆಯ ಗುರಿ

2072: ಶ್ರೀ ಎ.ಎಂ. ಭೆಳ್ಳಿಯಪ್ಪ (ಸೋಮವಾರ ಪೇಟೆ):–

ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿ ಮೀನುಮರಿ ಉತ್ಪಾದಿಸಲಾಗುತ್ತಿದೆಯೇ, ಹಾಗಾದರೆ ಕಳೆದ ವರ್ಷ ಎಷ್ಟು ಉತ್ಪಾದಿಸಲಾಗಿದೆ; ಈ ವರ್ಷದ ಉತ್ಪಾದನೆಯ ಗುರಿ ಎಷ್ಟು;

ಆ) ರಾಜ್ಯದಲ್ಲಿ ಮೀನುಮರಿ ಉತ್ಪಾದನೆಯು ಬೇಡಿಕೆಗೆ ತಕ್ಕಷ್ಟು ಆಗುತ್ತಿದೆಯೇ;

ಇ) ಹೊರ ರಾಜ್ಯಗಳಿಂದ ಮೀನುಮರಿಗಳನ್ನು ತರಿಸಿಕೊಳ್ಳಲಾಗುತ್ತಿದೆಯೇ, ಯಾವ ರಾಜ್ಯಗಳು ಎಷ್ಟು ಮೀನು ಮರಿಗಳನ್ನು ಒದಗಿಸುತ್ತಿದ್ದಾರೆ; ಅವು ಯಾವ ಜಾತಿಯವು ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಮಂತ್ರಿ):–

ಅ) ಹೌದು. ದೊಡ್ಡ ಗೆಂಡೆ ಜಾತಿ ಮೀನುಮರಿಗಳನ್ನು ಉತ್ಪಾಸಲಾಗುತ್ತಿದೆ. 1991–92ನೇ

ಸಾಲಿನಲ್ಲಿ 14 ಕೋಟಿ 50 ಲಕ್ಷ ಮೀನುಮರಿ ಫೈಗಳನ್ನು ಉತ್ಪಾದಿಸಲಾಗಿದೆ. 1992–93ರ ವಾರ್ಷಿಕ ಗುರಿ 15 ಕೋಟಿ ಫೈ ಮೀನು ಮರಿಗಳು.

ಆ) ರಾಜ್ಯದಲ್ಲಿ ಮೀನುಮರಿ ಉತ್ಪಾದನೆಯ ಬೇಡಿಕೆ ತಕ್ಕಷ್ಟು ಆಗುತ್ತಿಲ್ಲ.

ಇ) 1992–93ನೇ ಸಾಲಿನಲ್ಲಿ 7,75,470 ಕಟ್ಲಾ ಬಿತ್ತನೆ ಮೀನುಮರಿಗಳನ್ನು ಆಂಧ್ರ ಪ್ರದೇಶದಿಂದ ಕೊಂಡುಕೊಳ್ಳಲಾಗಿದೆ.

ರಾಜ್ಯದ ವಯಸ್ಕರ ಶಿಕ್ಷಣಕ್ಕೆ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆ

1261: ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ):–

ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೇಂದ್ರ ಸರ್ಕಾರದಿಂದ ಪ್ರತಿವರ್ಷ ರಾಜ್ಯ ವಯಸ್ಕರ ಶಿಕ್ಷಣಕ್ಕೆ ಬಿಡುಗಡೆ ಮಾಡುವ ಹಣವೆಷ್ಟು;

ಆ) ರಾಜ್ಯದಲ್ಲಿ ಎಷ್ಟು ವಯಸ್ಕರ ಶಿಕ್ಷಣ ಕೇಂದ್ರಗಳಿವೆ ?

ಶ್ರೀ ಪ್ರಭಾಕರ ಎಸ್. ರಾಣೆ (ವಯಸ್ಕರ ಶಿಕ್ಷಣ ರಾಜ್ಯ ಸಚಿವರು):–

ಅ) ಕೇಂದ್ರ ಸರ್ಕಾರವು ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕಾಗಿ ಬಿಡುಗಡೆ ಮಾಡುವ ಹಣ ರಾಜ್ಯ ಸರ್ಕಾರ ಹಮ್ಮಿಕೊಳ್ಳುವ ಕಾರ್ಯಕ್ರಮಗಳನ್ನು ಅವಲಂಬಿಸಿರುತ್ತದೆ. ಅದರಂತೆ ಈಗ 1991–92 ಮತ್ತು 1992–93ರಲ್ಲಿ ಬಿಡುಗಡೆ ಆಗಿರುವ ಹಣದ ವಿವರ ಈ ಕೆಳಕಂಡಂತಿದೆ;

ವರ್ಷ	ಕಾರ್ಯಕ್ರಮ	ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ (ರೂ. ಲಕ್ಷಗಳಲ್ಲಿ)
1991–92	(1) ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆ	230.13
	2. ಜನಶಿಕ್ಷಣ ನಿಲಯಗಳು	82.25
1992–93	1. ಜನಶಿಕ್ಷಣ ನಿಲಯಗಳು	82.25

ಇದಲ್ಲದೆ ಸಂಪೂರ್ಣ ಸಾಕ್ಷರತಾ ಆಂದೋಲನವನ್ನು ರಾಜ್ಯದ ಜಿಲ್ಲೆಗಳಲ್ಲಿ ಹಂತ ಹಂತವಾಗಿ ಹಮ್ಮಿಕೊಳ್ಳಲಾಗುತ್ತಿದ್ದು 1990–91 ರಿಂದ ಇಲ್ಲಿಯವರೆಗೆ ಒಟ್ಟು 1466.40 ರೂ. ಲಕ್ಷಗಳನ್ನು ಮತ್ತು ನಿರಂತರ ಶಿಕ್ಷಣಕ್ಕಾಗಿ ರೂ. 197.90 ಲಕ್ಷಗಳನ್ನು ಸಂಬಂಧಿಸಿದ ಜಿಲ್ಲಾ ಸಾಕ್ಷರತಾ ಸಮಿತಿಗಳಿಗೆ ಕೇಂದ್ರ ಸರ್ಕಾರವು ನೇರವಾಗಿ ಬಿಡುಗಡೆ ಮಾಡಿದೆ. ವಿವರ ಕೆಳಕಂಡಂತಿದೆ;